# ಆಗೋ ನೋಡು - ಮಳೆ ಬಂತು ಮಳೆ!

ಮಳೆ ಎಷ್ಟೋ ಬಾರಿ ಹೊಸ ಅನುಭವಗಳನ್ನು ಮತ್ತು ಅಚ್ಚರಿಯ ವಿಷಯಗಳನ್ನು ಹೊರ ತರುತ್ತದೆ. ಮಳೆಗಾಲದಲ್ಲಿ ನಮ್ಮ ಸುತ್ತ ನಾವೇನು ನೋಡಬಹುದು ಮತ್ತು ಅರಿತುಕೊಳ್ಳಬಹುದು? ಒಮ್ಮೆ ನಿಮ್ಮ ಮನೆಯ ಕಿಟಕಿಯ ಮೂಲಕ ನೋಡಿ, ಅಥವಾ ನಿಮ್ಮ ಮನೆಯ ಸುತ್ತ ಮುತ್ತ ಓಡಾಡಿ ಕೆಳಗಿನ ಯಾವುದಾದರೂ ಮೂರನ್ನು ಹುಡುಕಿ ಮತ್ತು 'ಆಗೋ ಅಲ್ಲಿ' ಎಂದು ಹೇಳಿ!




BENGALURU SUSTAINABILITY FORUM
The Fig Tree Learning Centre
Nature Classrooms
Connecting Learning to the Natural World
Maadhyama Aneka
ಮಾಧ್ಯಮ ಅನೇಕ

ಇದನ್ನು ಮಕ್ಕಳು ಮತ್ತು ದೊಡ್ಡವರಿಗೆ ಪ್ರಕೃತಿಯನ್ನು ಪರಿಚಯಿಸುವ ಕಾರ್ಯಕ್ರಮದ ಅಂಗವಾಗಿ ತಯಾರಿಸಲಾಗಿದೆ.

**ಈಗ ಒಂದಷ್ಟು ಚಟುವಟಿಕೆಯ ಸಮಯ!**
ಏರೋಪ್ಲೇನ್ ಚಿಟ್ಟೆಗಳು ಮತ್ತು ಹೆಲಿಕಾಪ್ಟರ್ ಚಿಟ್ಟೆಗಳನ್ನು ಗಮನವಿಟ್ಟು ನೋಡಿ ಅವುಗಳ ಮೈ ಬಣ್ಣ ಮತ್ತು ಸ್ವರೂಪಗಳನ್ನು, ಅವುಗಳನ್ನು ನೀವು ನೋಡಿದ ಜಾಗ ಮತ್ತು ಅವು ಹೇಗೆ ಹಾರಾಡುತ್ತವೆ, ಓಡಾಡುತ್ತವೆ ಎಂಬ ವಿವರಗಳನ್ನು ಬರೆದಿಟ್ಟುಕೊಳ್ಳಿ. ಏರೋಪ್ಲೇನ್ ಚಿಟ್ಟೆಗಳು ಮತ್ತು ಹೆಲಿಕಾಪ್ಟರ್ ಚಿಟ್ಟೆಗಳಿಗೆ ಸಂಯುಕ್ತ ಕಣ್ಣುಗಳಿವೆ (ನಮ್ಮ ಕಣ್ಣುಗಳಂತಹ ಪುಟ್ಟ ಪುಟ್ಟ ಸಾಧಾರಣ ಕಣ್ಣುಗಳನೇಕ ಸೇರಿ ಸಂಯುಕ್ತ ಕಣ್ಣುಗಳಾಗಿರುತ್ತವೆ). ಆ ಸಂಯುಕ್ತ ಕಣ್ಣುಗಳು ಏರೋಪ್ಲೇನ್ ಚಿಟ್ಟೆಗಳು ಮತ್ತು ಹೆಲಿಕಾಪ್ಟರ್ ಚಿಟ್ಟೆಗಳಿಗೆ ತಮ್ಮ ಸುತ್ತಲೂ ಒಮ್ಮೆಗೆ ನೋಡಲು ಸಹಾಯ ಮಾಡುತ್ತವೆ.

ನೀವು ಒಂದು ವೇಳೆ ಏರೋಪ್ಲೇನ್ ಚಿಟ್ಟೆಯೋ ಅಥವಾ ಹೆಲಿಕಾಪ್ಟರ್ ಚಿಟ್ಟೆಯೋ ಆದರೆ ನಿಮ್ಮ ಸಂಯುಕ್ತ ಕಣ್ಣುಗಳಿಂದ ಏನು ಕಾಣುವಿರಿ? ನಿಮ್ಮ ಆ ಪ್ರಪಂಚವನ್ನು ಚಿತ್ರ ಬರೆದು ವಿವರಣೆ ನೀಡಿ.

BENGALURU SUSTAINABILITY FORUM
The Fig Tree Learning Centre
Nature Classrooms
Connecting Learning to the Natural World
Maadhyama Aneka
ಮಾಧ್ಯಮ ಅನೇಕ
ಇದನ್ನು ಮಕ್ಕಳು ಮತ್ತು ದೊಡ್ಡವರಿಗೆ ಪ್ರಕೃತಿಯನ್ನು ಪರಿಚಯಿಸುವ ಕಾರ್ಯಕ್ರಮದ ಅಂಗವಾಗಿ ತಯಾರಿಸಲಾಗಿದೆ.